ದಿನಾಂಕ 16-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : 1 ನೇ ಪ್ರತಿವಾದಿಯಿಂದಃ**

ಇದೇ ನ್ಯಾಯಾಲಯದ ಕ್ರಿ ಮಿ ಸಂಃ 13/2002 ರಲ್ಲಿ ಸಲ್ಲಿಸಿದ ಮುಖ್ಯ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-3 ಎಂದು, ಸದರಿ ಮುಖ್ಯ ಅರ್ಜಿಗೆ ಸಲ್ಲಿಸಿದ ತಕರಾರು ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-4 ಎಂದು, ಸದರಿ ಪ್ರಕರಣದಲ್ಲಿ ಸಲ್ಲಿಸಿದ ಮೆಮೋ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-5 ಎಂದು, ಸದರಿ ಪ್ರಕರಣದ ಆದೇಶದ ಹಾಳೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-6 ಎಂದು, ಇದೇ ನ್ಯಾಯಾಲಯದ ಕ್ರಿ ಮಿ ಸಂಃ 12/2004 ರಲ್ಲಿ ಸಲ್ಲಿಸಿದ ಮುಖ್ಯ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-7 ಎಂದು, ಸದರಿ ಮುಖ್ಯ ಅರ್ಜಿಗೆ ಸಲ್ಲಿಸಿದ ತಕರಾರು ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-8 ಎಂದು, ಸದರಿ ಪ್ರಕರಣದಲ್ಲಿ ಸಲ್ಲಿಸಿದ ಮೆಮೋ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-9 ಎಂದು, ಸದರಿ ಪ್ರಕರಣದ ಆದೇಶದ ಹಾಳೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-10 ಎಂದು, ಇದೇ ನ್ಯಾಯಾಲಯದ ಅಸಲು ದಾವಾ ಸಂಃ 148/2009 ರಲ್ಲಿ ಸಲ್ಲಿಸಿದ ವಾದ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-11 ಎಂದು, ಸದರಿ ದಾವೆಯಲ್ಲಿ ಸಲ್ಲಿಸಿದ ಸರ್ಟಿಫಿಕೇಟನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-12 ಎಂದು, ಸದರಿ ದಾವೆಯಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-13 ಎಂದು, ಸದರಿ ದಾವೆಯಲ್ಲಿ ಆದ ರಾಜಿ ಡಿಕ್ರಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-14 ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ ವಾದಿಯರ ಪರ ಶ್ರೀ ಬಿ.ಆರ್.ಪಿ ವಕೀಲರಿಂದಃ**</u>

ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳನ್ನು ಬರೆಸಲು ನಾನು ಮಾಹಿತಿ ನೀಡಿರುವುದಿಲ್ಲ. ಅವುಗಳನ್ನು ವಕೀಲರೇ ತಯಾರಿಸಿರುತ್ತಾರೆ. ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯು ಪಾಟೀ ಸವಾಲಿಗೆ ಉತ್ತರ ನೀಡಲು ತಯಾರಿ ಮಾಡಿರುವುದಿಲ್ಲ ಎಂದು ತಿಳಿಸಿದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ